# ಅಂಬಿಗ ನಾ ನಿನ್ನ ನಂಬಿದೆ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 403.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 16.
3. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 102.
4. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 47.
5. **Note:** Lyrics mentioned without highlights are as per Ref. 1 and the lyrics given in yellow highlights are as per Ref. 2. In Ref. 2 there are only 4 stanzas.
6. **Note:** Lyrics given in green highlights are as per Ref. 3. These wordings are slightly different.
7. **Note:** Singer has mostly followed lyrics as in Ref. 1. But he has mixed wordings from Ref. 2 also.

ರಾಗ: ಶಂಕರಾಭರಣ ತಾಳ: ಆದಿ

| | |
|---|---|
| ಅಂಬಿಗ ನಾ ನಿನ್ನ ನಂಬಿದೆ | ಅಂಬಿಗ ನಾ ನಿನ್ನ ನಂಬಿದೆ |
| ಜಗದಂಬಾರಮಣ ನಿನ್ನ ನಂಬಿದೆ II ಪ II | ಜಗದಂಬಾರಮಣ ನಿನ್ನ ನಂಬಿದೆ |
| | |
| ತುಂಬಿದ ಹರಿಗೋಲಂಬಿಗ | ತುಂಬಿದ ಹರಿಗೋಲಂಬಿಗ, ಅದ- |
| ಅದಕೊಂಬತ್ತು ಛಿದ್ರ ನೋಡಂಬಿಗ | ಕೊಂಬತ್ತು ಛಿದ್ರವು ಅಂಬಿಗ |
| ಸಂಭ್ರಮದಿಂದ ನೀನಂಬಿಗ, ಅದ- | ಸಂಭ್ರಮದಿಂ ನೋಡಂಬಿಗ, ಅದ- |
| ರಿಂಬು ನೋಡಿ ನಡೆಸಂಬಿಗ II 1 II | ರಿಂಬು ನೋಡಿ ನಡೆಸಂಬಿಗ |
| | |
| ಹೊಳೆಯ ಭರವ ನೋಡಂಬಿಗ | ಹೊಳೆಯ ಭರವ ನೋಡಂಬಿಗ, ಅದಕೆ |
| ಅದಕೆ ಸೆಳವು ಘನವಯ್ಯ ಅಂಬಿಗ | ಸೆಳವು ಘನವಯ್ಯ ಅಂಬಿಗ |
| ಸುಳಿಯೊಳು ಮುಳುಗಿದೆ ಅಂಬಿಗ, ಎನ್ನ | ಸುಳಿಯೊಳು ಮುಳುಗಿದೆ ಅಂಬಿಗ, ಎನ್ನ |
| ಸೆಳೆದು ಕೊಂಡೊಯ್ಯೊ ನೀನಂಬಿಗ II 2 II | ಸೆಳೆದು ಕೊಂಡೊಯ್ಯೊ ನೀನಂಬಿಗ |
| | |
| ಆರು ತೆರೆಯ ನೋಡಂಬಿಗ | ಆರು ತೆರೆಯ ನೋಡಂಬಿಗ, ಅದು |
| ಅದು ಮೀರಿ ಬರುತಲಿದೆ ಅಂಬಿಗ | ಮೀರಿ ಬರುತಲಿದೆ ಅಂಬಿಗ |

ಯಾರಿಂದಲಾಗದು ಅಂಬಿಗ, ಅದ ನಿ-
ವಾರಿಸಿ ದಾಟಿಸೊ ಅಂಬಿಗ || 3 ||

ಯಾರಿಂದಲಾಗದು ಅಂಬಿಗ, ಅದ ನಿ-
ವಾರಿಸಿ ದಾಟಿಸೊ ಅಂಬಿಗ

ಹೊತ್ತು ಹೋಯಿತು ನೋಡಂಬಿಗ, ಅಲ್ಲಿ
ಮತ್ತ್ಯೆವರೀರ್ವರು ಅಂಬಿಗ
ಒತ್ತಿ ನಡೆಸು ನೋಡಿ ಅಂಬಿಗ
ಎನ್ನ ಸತ್ಯಲೋಕಕೆ ಒಯ್ಯೊ ಅಂಬಿಗ || 4 ||

ಸತ್ವ ಪಥದೊಳಗಂಬಿಗ ಪರಾ
ಭಕ್ತಿ ಹುಟ್ಟನು ಹಾಕಿ ಅಂಬಿಗ
ಮುಕ್ತಿದಾಯಕ ನಮ್ಮ ಪುರಂದರ ವಿಠಲನ
ಮುಕ್ತಿ ಮಂಟಪಕೊಯ್ಯೊ ಅಂಬಿಗ || 5 ||

ಸತ್ಯವೆಂಬುದೆ ಹುಟ್ಟಂಬಿಗ
ಸದಾ ಭಕ್ತಿಯೆಂಬುದೆ ಪಥವಂಬಿಗ
ನಿತ್ಯ ಮೂರುತಿ ಪುರಂದರ ವಿಠಲ, ನಮ್ಮ
ಮುಕ್ತಿ ಮಂಟಪಕೊಯ್ಯೊ ಅಂಬಿಗ || 4 ||

**Note:** Lyrics given in green highlights are as per Ref. 3 cited above. These wordings are slightly different.

ರಾಗ: ಶಂಕರಾಭರಣ ತಾಳ: ಆದಿ

ಅಂಬಿಗ ನಾ ನಿನ್ನ ನಂಬಿದೆ
ಜಗದಂಬಾರಮಣ ನಿನ್ನ ಹೊಂದಿದೆ || ಪ ||

ತುಂಬಿದ ಹರಿಗೋಲಂಬಿಗ, ಅದ-
ಕೊಂಬತ್ತು ಛಿದ್ರಗಳಂಬಿಗ
ಸಂಭ್ರಮದಿಂದಲಿ ಅಂಬಿಗ, ಅದ-
ರಿಂಬನರಿತು ನಡೆಸಂಬಿಗ || ೧ ||

ಹೊಳೆಯ ಅಬ್ಬರ ನೋಡಂಬಿಗ, ಅಲ್ಲಿ
ಸೆಳವು ಬಹಳ ಕಾಣೋ ಅಂಬಿಗ
ಸುಳಿಗೊಳಗಾದೆನು ಅಂಬಿಗ, ಎನ್ನ
ಸೆಳೆದುಕೊಂಡು ಒಯ್ಯೋ ಅಂಬಿಗ || ೨ ||

ಹತ್ತು ಬೆಂಬಡಿಗರು ಅಂಬಿಗ, ಅಲ್ಲಿ
ಒತ್ತಿ ಬರುತಲಿಹರಂಬಿಗ
ಹತ್ತುವರೆತ್ತಲು ಅಂಬಿಗ, ಎನ್ನ
ಎತ್ತಿಕೊಂಡು ಒಯ್ಯೋ ಅಂಬಿಗ || ೩ ||

ಆರು ತೆರೆಯ ನೋಡಂಬಿಗ, ಸುತ್ತಿ
ಮೀರಿ ಬರುತಲಿವೆ ಅಂಬಿಗ
ಆರೆನೆಂತಿತು ಅಂಬಿಗ, ಮುಂದೆ
ದಾರಿಯ ತೋರಿಸು ಅಂಬಿಗ ॥ ೪ ॥

ಸತ್ಯವೆಂಬುವ ಹುಟ್ಟು ಅಂಬಿಗ
ಭಕ್ತಿ ಎಂಬುವ ಪಾತ್ರ ಅಂಬಿಗ
ನಿತ್ಯ ಮುಕ್ತ ನಮ್ಮ ಪುರಂದರ ವಿಠಲನ
ಮುಕ್ತಿ ಮಂಟಪಕೆ ಒಯ್ಯೋ ಅಂಬಿಗ ॥ ೫ ॥

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ದಾಸರು ದೇವರನ್ನು ಅಂಬಿಗನ ರೂಪಕದಿಂದ ಕೊಂಡಾಡಿ, ಅವನನ್ನು ಭಾವ ಸಾಗರದಿಂದ ದಾಟಿಸೆಂದು ಬೇಡಿಕೊಂಡಿದ್ದಾರೆ.

**ಅಂಬಿಗ** – ದೋಣಿ ನಡೆಸುವವ; ಸಂಸಾರದಿಂದ ಕಡೆಹಾಯಿಸುವ ಪರಮಾತ್ಮ.

**ಜಗದಂಬಾರಮಣ** – ಜಗತ್ತಿಗೆ ಮೂಲಪ್ರಕೃತಿಯಾಗಿ ತಾಯಿಯಂತಿರುವ ಲಕ್ಷ್ಮಿಯ ಗಂಡ, ಲಕ್ಷ್ಮೀ ರಮಣ

**ಹರಿಗೋಲು** – ಸಂಸಾರವೆಂಬ ನೀರಿನ ಮೇಲೆ ತೇಲುವ ದೇಹ.

**ಒಂಬತ್ತು ಛಿದ್ರ** – ಒಂಬತ್ತು ಬಾಗಿಲುಗಳು ('ನವದ್ವಾರ'). (ಬಾಯಿ, ಎರಡು ಕಣ್ಣು, ಕಿವಿಗಳು ಎರಡು, ಮೂಗಿನ ಎರಡು ಹೊರಳೆಗಳು, ಗುದ ಮತ್ತು ಜನನೇಂದ್ರಿಯ)

**ಇಂಬು** – ನೆಲೆ.

**ಹೊಳೆ** – ಜೀವನ, ಬದುಕೆಂಬುದು.

**ಸೆಳೆವು** – ಅದನ್ನು ನೂಕಿಕೊಂಡು ಹೋಗುವ ಕರ್ಮ; ದಟ್ಟವಾಗಿದೆ.

**ಸುಳಿ** – ಚಕ್ರವೆಂಬುದರ ಛಾಯೆ; ಜನನ ಮರಣಗಳೆಂಬ ತಿರುಗಣಿ.

**ಆರು ತೆರೆ** – ಹಸಿವು, ಬಾಯಾರಿಕೆ, ಶೋಕ, ಮೋಹ, ಜರೆ, ಸಾವು ಇವು ಷಡೂರ್ಮಿಗಳೆಂದು ಪ್ರಸಿದ್ಧವಾಗಿವೆ; ಅವು ಎಲ್ಲ ಪ್ರಾಣಿಗಳನ್ನೂ ಕೊಚ್ಚಿಕೊಂಡು ಹೋಗುವುವು.

**ಹೊತ್ತು ಹೋಯಿತು** – ಬರಿದೆ ಆಯುಸ್ಸು ಸಾಗುತ್ತಿದೆ.

**ಐವರೀರ್ವರು** – ಐದು ಜ್ಞಾನೇಂದ್ರಿಯಗಳು (ಕಣ್ಣು, ಕಿವಿ, ಮೂಗು, ನಾಲಗೆ, ಚರ್ಮ), ಐದು ಕರ್ಮೇಂದ್ರಿಯಗಳು (ಕೈ, ಕಾಲು, ಮಾತು, ಪಾಯು, ಉಪಸ್ಥೆ).

**ಸತ್ಯ ಲೋಕಕೆ –** ತತ್ತ್ವದರ್ಶನಕ್ಕೆ; ಮಾಯದ ಈ ಸಂಸಾರದಿಂದ ದಿಟವಾದ ಪರಮಾತ್ಮನೆಡೆಗೆ.

**ಸತ್ತ್ವಪಥ –** ಸತ್ತ್ವಗುಣದ ಉದ್ರೇಕವಿರುವಂಥ ದಾರಿ; ಸದಾಚಾರ.

**ಪರಾಭಕ್ತಿ –** ಆತ್ಯಂತಿಕ ಭಕ್ತಿ; ಯಾವ ಕಾಮನೆಯೂ ಇಲ್ಲದೆ ಹರಿಸರ್ವೋತ್ತಮತ್ವವನ್ನು ಅರಿತು, ಹರಿಸೇವೆಯೇ ಬದುಕಿನ ಗುರಿ ಎಂದು ಭಾವಿಸಿ, ಮುಕ್ತಿಗೆ ಕಾರಣವಾಗುವ ಜ್ಞಾನವನ್ನು ಪಡೆಯಲೆಂದೇ ಭಕ್ತಿಯನ್ನು ಮಾಡುವುದು; ಇದನ್ನು ನಿರ್ಗುಣಭಕ್ತಿಯೆಂದೂ ಕರೆಯುತ್ತಾರೆ. ಸಂಸಾರಸಾಗರವನ್ನು ದಾಟಲು ಇದೇ ಮುಖ್ಯಸಾಧನೆಯಾದುದರಿಮದ ಅದನ್ನು ದೋಣಿಯ ಹುಟ್ಟುಕಾಕುವುದಕ್ಕೆ ಹೋಲಿಸಿದ್ದಾರೆ.

**ಮುಕ್ತಿ ಮಂಟಪ –** ವೈಕುಂಠ; ಮುಕ್ತರು ಪರಮಾತ್ಮನ ನಿತ್ಯ ಓಲಗದಲ್ಲಿ ಆನಂದಿಸುವ ಎಡೆ.

**ಹತ್ತು ಬೆಂಬಡಿಗರು** = ದಶೇಂದ್ರಿಯಗಳು

**ಪಂಚ ಕರ್ಮೇಂದ್ರಿಯ** = ಕೈ, ಕಾಲು, ಗುದ, ಉಪಸ್ಥ ಮತ್ತು ಬಾಯಿ

**ಪಂಚ ಜ್ಞಾನೇಂದ್ರಿಯ** = ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ

**ಬೆಂಬಡಿಗರು** = ಘಾತಕರು, ಸುಲಿಗೆಗಾರರು

**ಹತ್ತುವರೆತ್ತಲು** = ಸುತ್ತುವರೆದಿರುವವರು

**ಆರು ತೆರೆ** = ಷಡ್ರಿಪುಗಳು - ಕಾಮ, ಕ್ರೋಧ, ಲೋಭ, ಮದ, ಮತ್ಸರ ಮತ್ತು ಮೋಹ

**ಆರೆನು** = ಅಸಮರ್ಥನು

**ಓದು** = ಜ್ಞಾನ

**ವಿ. ಸೂ: -** ಸತ್ಯವಂತನಾಗಿ ಜ್ಞಾನ ಭಕ್ತಿಗಳನ್ನು ಹೊಂದಿದರೆ ಮೋಕ್ಷ ಸಿಕ್ಕುವುದೆಂಬ ಭಾವ.

**Classification:** Mundige
**Ankita:** purandara vittala
**Location:** NA
**Category:** Pooja Tatva, Rama Stuti, Bhakti
**Sub-Category:** ambiga, rama, nadi, satya, huttu, bhakti, bhava, Samudra, mukti, loka, moksha, jnana,
**Pravachana:** NA
**Explanation:** Dr. Vijayendra Desai, Dharwad.